(ಉ) ಬಂದಿದೆ.

ಕೆಲವು ಶಾಲೆಗಳಿಗೆ ಪ್ರಥಮ ಭಾಷೆ ಆಂಗ್ಲ ಸಂಸ್ಕೃತಿ ತೃತೀಯ ಭಾಷೆ ಕನ್ನಡ ಮತ್ತು ಉರ್ದು ಶೀರ್ಷಿಕೆಗಳ ಪಠ್ಯಪುಸ್ತಕಗಳು ಮಾತ್ರ ವಿತರಣೆ ಆಗಿರಲಿಲ್ಲ ಸರ್ಕಾರಿ ಮುದ್ರಣಾಲಯಕ್ಕೆ ನೀಡಿದ್ದ ಶೀರ್ಷಿಕೆಗಳ ಮುದ್ರಣ ವಿಳಂಬವಾದ ಕಾರಣ ಈ ರೀತಿ ಆಗಿರುತ್ತದೆ. ಈ ಎಲ್ಲ ಶಾಲೆಗಳಿಗೂ ವಿತರಣೆ ಮಾಡಲಾಗಿರುತ್ತದೆ.

ಪ್ರಾಥಮಿಕ ಶಾಲೆಗಳ ಸಂಖ್ಯಾಬಲ

302 (370) ಶ್ರೀ ಶ್ರೀನಿವಾಸ್ ಎಂ (ಮಂಡ್ಯ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಮಂಡ್ಯ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಶಾಲೆಗಳಲ್ಲಿ ಕಡಿಮೆ ಸಂಖ್ಯೆ ವಿದ್ಯಾರ್ಥಿಗಳಿರುವ ಶಾಲೆಗಳನ್ನು ಗುರುತಿಸಲಾಗಿದೆಯೇ

(ಆ) ಗುರುತಿಸಿದ್ದಲ್ಲಿ ಅಂತಹ ಶಾಲೆಗಳಾವುವು (ಮಾಹಿತಿ ನೀಡುವುದು)

(ಇ) ಕಡಿಮೆ ಸಂಖ್ಯೆ ವಿದ್ಯಾರ್ಥಿಗಳಿರುವ ಶಾಲೆಗಳನ್ನು ಇತರೆ ಯಾವ ಶಾಲೆಗಳಿಗೆ ವಿಲೀನಗೊಳಿಸಲು ತಿರ್ಮಾನಿಸಲಾಗಿದೆ (ವಿವರ ನೀಡುವುದು)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):–

(ಅ) ಹೌದು

ಆ) 1. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಮಾಯಣ್ಣನಕೊಪ್ಪಲು, ಮಂಡ್ಯ ತಾಲ್ಲೂಕು (ದಾಖಲಾತಿ ಸಂಖ್ಯೆ ಶೂನ್ಯ)

2. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಮಾಡವೀರನಹಳ್ಳಿ, ಮಂಡ್ಯ ತಾಲ್ಲೂಕು (ದಾಖಲಾತಿ ಸಂಖ್ಯೆ 5)

3. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಗುನ್ನಾಯಕನಹಳ್ಳಿ, (ದಾಖಲಾತಿ ಸಂಖ್ಯೆ 6)

ಇ) 1. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಮಾಯಣ್ಣನಕೊಪ್ಪಲು, ಇಲ್ಲಿನ ದಾಖಲೆ ಹಾಗೂ ಇತರೆ ವಸ್ತುಗಳನ್ನು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಯಲಿಯೂರು ಶಾಲೆಗೆ ವಿಲೀನಗೊಳಿಸಲಾಗುವುದು.

2. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಮಾಡವೀರನಹಳ್ಳಿ ಶಾಲೆಯನ್ನು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ತರಣಿಗೆರೆ ಶಾಲೆಗೆ ವಿಲೀನಗೊಳಿಸಲಾಗುವುದು.

3. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಗುನ್ನಾಯಕನಹಳ್ಳಿ ಈ ಶಾಲೆಯನ್ನು ಮರಡೀಪುರ ಶಾಲೆಗೆ ವಿಲೀನಗೊಳಿಸಲಾಗುವುದು.

ನಂಜುಂಡಪ್ಪ ವರದಿಯನ್ವಯ 2012–13ನೇ ಸಾಲಿಗೆ ನೀಡುವ ಅನುದಾನ

221 (169) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) :– ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಯೋಜನೆ ಮತ್ತು ಸಾಂಖ್ಯಿಕ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) 2012–13ನೇ ಸಾಲಿಗೆ ನಂಜುಡಪ್ಪ ವರದಿ ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆಗೆ ವಿವಿಧ ಕಾರ್ಯಕ್ರಮಗಳಿಗೆ ಎಷ್ಟು ಅನುದಾನ ಮೀಸಲಿಡಲಾಗಿದೆ; (ಕ್ಷೇತ್ರವಾರು ವಿವರ ನೀಡುವುದು)

(ಆ) ಈ ಯೋಜನೆಯಡಿಯಲ್ಲಿ ಸಾಮಾನ್ಯ ಆಯವ್ಯಯದಲ್ಲಿ ಒದಗಿಸಿರುವ ಅನುದಾನ ಹೊರತುಪಡಿಸಿ ಹೆಚ್ಚುವರಿಯಾಗಿ ಎಷ್ಟು ಅನುದಾನ ಮೀಸಲಿಡಲಾಗಿದೆ;

(ಇ) 2012ನೇ ಜೂನ್ ಅಂತ್ಯದವರೆಗೆ ಎಷ್ಟು ಪ್ರಗತಿ ಸಾಧಿಸಲಾಗಿದೆ ?

ಶ್ರೀ ಎಸ್. ಶಿವಣ್ಣ (ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಯೋಜನೆ ಮತ್ತು ಸಾಂಖ್ಯಿಕ ಸಚಿವರು):–

ಅ) ಡಾ. ನಂಜುಂಡಪ್ಪ ವರದಿ ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆಗೆ 2012–13ನೇ ಸಾಲಿನಲ್ಲಿ ಈವರೆಗೆ ಅನುಮೋದಿಸಲಾದ 10 ಇಲಾಖೆಗಳ ಕಾರ್ಯಕ್ರಮಗಳ ಕ್ರಿಯಾ ಯೋಜನೆಗೆ ತಾಲೂಕುವಾರು ಮೀಸಲಿಡಲಾದ ಅನುದಾನದ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಕ್ಷೇತ್ರವಾರು ವಿವರಗಳನ್ನು ಸಂಗ್ರಹಿಸಿರುವುದಿಲ್ಲ.

(ಆ) ವಾರ್ಷಿಕ ಆಯವ್ಯಯದಲ್ಲಿ ವಿಶೇಷ ಅಭಿವೃದ್ಧಿ ಯೋಜನೆಯಡಿ ಮೀಸಲಿಡಲಾದ ಮೊತ್ತಕ್ಕೆ ಇಲಾಖೆಗಳು ಅನುದಾನವನ್ನು ಒದಗಿಸಿರುತ್ತವೆ.

(ಇ) 2012ನೇ ಜೂನ್ ಅಂತ್ಯದವರೆಗೆ 3972.69 ಲಕ್ಷ ರೂ. ಗಳ ಪ್ರಗತಿ ಸಾಧಿಸಲಾಗಿದೆ ?